**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಅಮಲ್ಜಾರಿ ಅರ್ಜಿ ನಂ.48/2013**

**ಸಿ.ಡಬ್ಲ್ಯೂ:1**

**ಹೆಸರು** : ಸುಮಾ
ಗಂಡನ **ಹೆಸರು** : ಕೃಷ್ಣಮೂರ್ತಿ
**ವಯಸ್ಸು** : 40 **ವರ್ಷ**
**ಉದ್ಯೋಗ** : ಸರ್ವೇಯರ್
**ವಾಸಸ್ಥಳ** : ಶಿವಮೊಗ್ಗ

**ದಿನಾಂಕ. 12-09-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಡಿಕ್ರಿದಾರರ ಪರ ವಕೀಲರವರಿಂದ.**

ನನಗೆ ನ್ಯಾಯಾಲಯದಿಂದ ಕಮಿಷನರ್ ವಾರೆಂಟ್ ಬಂದಿದ್ದು, ಅದನ್ನು ಪಡೆದು ಸದರಿ ವಾರೆಂಟಿನಲ್ಲಿ ತಿಳಿಸಿದಂತೆ ಮೊದಲು ನಾನು ಡಿಕ್ರಿದಾರರಿಗೆ ಹಾಗೂ ತೀರ್ಪುಋಣಿದಾರರಿಗೆ ನೊಂದಣಿ ಅಂಚೆ ಮೂಲಕ ನೋಟೀಸನ್ನು ನೀಡಿದ್ದು, ಸದರಿ ನೋಟೀಸು ಇಬ್ಬರೂ ಪಕ್ಷಗಾರರಿಗೆ ತಲುಪಿದ್ದು, ಸದರಿ ನೋಟೀಸಿನಲ್ಲಿ ನಿಗಧಿಪಡಿಸಿದಂತೆ ಅಳತೆ ದಿನಾಂಕದಂದು ದಾವಾಸ್ಥಳಕ್ಕೆ ಭೇಟಿ ನೀಡಿದ್ದು, ಆ ಸಮಯಕ್ಕೆ ಎರಡೂ ಪಕ್ಷಗಾರರು ಸ್ಥಳದಲ್ಲಿ ಹಾಜರಿದ್ದರು. ಆ ದಿನ ಜಮೀನನ್ನು ಅಳತೆ ಮಾಡಲಾಗಿ ಅಳತೆ ಸರಿಯಾಗಿ ಸಿಗದೇ ಇದ್ದ ಕಾರಣಕ್ಕೆ ಇಬ್ಬರೂ ಪಕ್ಷಗಾರರ ಒಪ್ಪಿಗೆಯನ್ನು ಪಡೆದು ಮುಂದಿನ ದಿನಾಂಕವನ್ನು ನಿಗಧಿ ಮಾಡಿ ವಾಪಾಸ್ಸು ಬಂದಿದ್ದು, ಮುಂದಿನ ದಿನಾಂಕದ ಬಗ್ಗೆ ಇಬ್ಬರೂ ಪಕ್ಷಗಾರರಿಗೆ ನಮ್ಮ ಜವಾನನ ಮೂಲಕ ನೋಟೀಸು ಕಳುಹಿಸಿದ್ದು, ಇಬ್ಬರಿಗೂ ಜಾರಿಯಾಗಿರುತ್ತದೆ. ನಿಗಧಿಯಾದ ದಿನಾಂಕದಂದು ಅಳತೆ ಕಾರ್ಯವನ್ನು ಮಾಡಿ ಸರ್ವೆ ನಂ:51/1 ಮತ್ತು 2 ರ ಜಮೀನಿನ ಗಡಿ ಗುರುತುಗಳನ್ನು ಗುರುತಿಸಿ ಕಲ್ಲು ಹಾಕಿಸಿ ಬಂದಿರುತ್ತೇವೆ. ನಾನು ನಮ್ಮ ಇಲಾಖೆಯ ಸರ್ವೇ ದಾಖಲೆಗಳ ಆಧಾರದ ಮೇಲೆ ಅಳತೆ ಕಾರ್ಯವನ್ನು ಮಾಡಿರುತ್ತೇನೆ. ಆ ದಿನ ತೀರ್ಪುಋಣಿದಾರರು ಅಳತೆ ಕಾರ್ಯ ಮಾಡುವ ಸಮಯಕ್ಕೆ ನೋಟೀಸು ಪಡೆದೂ ಸಹ ಹಾಜರಿರಲಿಲ್ಲ. ಅಳತೆ ಕಾರ್ಯದ ಸಮಯದಲ್ಲಿ ಹಾಜರಿದ್ದ ಡಿಕ್ರಿದಾರರು ಮತ್ತು ಗ್ರಾಮಸ್ಥರ ಸಮಕ್ಷಮದಲ್ಲಿ ಅಳತೆ ಕಾರ್ಯ ಮಾಡಿ ಅವರ ಹೇಳಿಕೆ ಮತ್ತು

ಸಹಿ ಪಡೆದಿರುತ್ತೇನೆ. ನಾನು ಮಾಡಿದ ಅಳತೆ ಕಾರ್ಯದಂತೆ ನಕ್ಷೆಯನ್ನು ತಯಾರಿಸಿ ಉಭಯ ಪಕ್ಷಗಾರರು ನೀಡಿದ ಸೂಚನಾವಳಿಗಳಿಗೆ ಉತ್ತರವನ್ನು ನೀಡಿ ವರದಿಯನ್ನು ಸಿದ್ದಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ತನಗೆ ನೀಡಿರುವ ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-*1* ಎಂದು ಗುರುತಿಸಲಾಯ್ತು. ಎರಡೂ ಪಕ್ಷಗಾರರ ಸೂಚನಾವಳಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಸಿ-*2* ಮತ್ತು *3* ಎಂದು ಗುರುತಿಸಲಾಯ್ತು. ಸಾಕ್ಷಿ ತಾನು ಪಡೆದ ಅಸಲು ದಾವಾ ಸಂಃ*308/2010* ರ ಡಿಕ್ರಿಯ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-*4* ಎಂದು ಗುರುತಿಸಲಾಯ್ತು. ದಿಃ*06-06-2018* ಮತ್ತು ದಿಃ*26-6-2018* ರಂದು ನೀಡಿದ ನೋಟೀಸಿನ ಪ್ರತಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಸಿ-*5* ಮತ್ತು *6* ಎಂದು ಗುರುತಿಸಲಾಯ್ತು. ಎರಡು ಅಂಚೆ ರಶೀದಿ ಹಾಗೂ ಎರಡು ಸ್ವೀಕೃತಿ ಪ್ರತಿಗಳನ್ನು ಅವುಗಳನ್ನು ಕ್ರಮವಾಗಿ ನಿಸಿ-*7* ರಿಂದ *9* ಎಂದು ಗುರುತಿಸಲಾಯ್ತು. ದಿಃ*18-6-2018* ರ ಹೇಳಿಕೆ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-*10* ಎಂದು ಗುರುತಿಸಲಾಯ್ತು. ದಿಃ*10-07-2018* ರ ಹೇಳಿಕೆಯ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಸಿ-*11* ಎಂದು ಗುರುತಿಸಲಾಯ್ತು. ದಿಃ*10-07-2018* ರ ಡಿಕ್ರಿದಾರ ಹಾಗೂ ತೀರ್ಪುಋಣಿದಾರರ ಸೂಚನಾವಳಿಗಳಿಗೆ ನೀಡಿರುವ ಉತ್ತರದ ಪ್ರತಿಗಳನ್ನು ಅವುಗಳನ್ನು ಕ್ರಮವಾಗಿ ನಿಸಿ-*12* ಮತ್ತು *13* ಎಂದು ಗುರುತಿಸಲಾಯ್ತು. ದಿಃ*10-07-2018* ರಂದು ತಯಾರಿಸಿದ ಸರ್ವೆ ನಂಃ *57/1, 2* ರ ಬಾಬ್ತು ನಕ್ಷೆಯನ್ನು ಅದನ್ನು ನಿಸಿ-*14* ಎಂದು ಗುರುತಿಸಲಾಯ್ತು. ದಿಃ*10-07-2018* ರಂದು ತಯಾರಿಸಿದ ಕಮಿಷನರ್ ವರದಿಯನ್ನು ಅದನ್ನು ನಿಸಿ-*15* ಎಂದು ಗುರುತಿಸಲಾಯ್ತು.

***ಪಾಟೀ ಸವಾಲುಃ*** ತೀರ್ಪುಋಣಿದಾರರ ಪರ ಶ್ರೀ ಬಿ ಎನ್ ಕೆ **ವಕೀಲರಿಂದ.**

ನಾನು *7, 8* ಪ್ರಕರಣದಲ್ಲಿ ನ್ಯಾಯಾಲಯದ ನಿಯೋಗಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದ ಸೂಚನೆ ಮೇರೆಗೆ ಮಾಡುವಂತಹ ಅಳತೆ ಕಾರ್ಯದಲ್ಲಿ ವಿಶೇಷ ಸೂಚನೆ ವಹಿಸಬೇಕೆಂಬ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ನಾನು ದಿಃ*18-06-2018* ರಂದು ಬೆಳಿಗ್ಗೆ *11-30* ಕ್ಕೆ ಸ್ಥಳಕ್ಕೆ ಬಂದು ಸಂಜೆ *5-30* ರವರೆಗೆ ಇದ್ದೆನು. ಆ ದಿನ ಬಾಂದ್ ಕಲ್ಲುಗಳನ್ನು ಪತ್ತೆ ಮಾಡಲು ಆಗಲಿಲ್ಲ ಎಂದರೆ ಸರಿ.

ದಿ:*18-6-2018* ರಂದು ಪಡೆದ ಹೇಳಿಕೆಯಲ್ಲಿ ಮುಂದಿನ ದಿನಾಂಕ ನಿಗಧಿಪಡಿಸಿಲ್ಲ ಎಂದರೆ ಸರಿ. ದಿ:*10-07-2018* ರಂದು ಸ್ಥಳಕ್ಕೆ ಭೇಟಿ ನೀಡುವ ಬಗ್ಗೆ ತೀರ್ಪುಋಣಿದಾರರಿಗೆ ನೊಂದಣಿ ಅಂಚೆ ಮೂಲಕ ನೋಟೀಸು ನೀಡಿಲ್ಲ ಎಂದರೆ ಸಾಕ್ಷಿಯು ದಿ:*18-6-2018* ರಂದು ಇಬ್ಬರೂ ಪಕ್ಷಗಾರರು ಒಪ್ಪಿಕೊಂಡಿದ್ದರಿಂದ ನೀಡಿಲ್ಲ ಎಂದು ನುಡಿಯುತ್ತಾರೆ. ದಿ:*10-7-2018* ರಂದು ಅಳತೆ ಕಾರ್ಯಕ್ಕೆ ಬರುವ ಬಗ್ಗೆ ನೀಡಿದ ನೋಟೀಸು ತೀರ್ಪುಋಣಿದಾರನಿಗೆ ಜಾರಿಯಾಗಿಲ್ಲ ಎಂದರೆ ಸಾಕ್ಷಿಯು ಅವರ ಮಗನಿಗೆ ಜಾರಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಾನು ತೀರ್ಪುಋಣಿದಾರರಿಗಾಗಲೀ, ಅವರ ಮಗನಿಗಾಗಲೀ ಯಾವುದೇ ನೋಟೀಸು ಜಾರಿ ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಜವಾನರೇ ಹೋಗಿ ಅವರ ಮಗನಿಗೇ ಜಾರಿ ಮಾಡಿರುತ್ತಾರೆಂದು ನುಡಿಯುತ್ತಾರೆ.

ದಿ:*10-7-2018* ರಂದು ಸ್ಥಳಕ್ಕೆ ಭೇಟಿ ನೀಡಿದಾಗ ಮಳೆ ಇತ್ತು ಎಂದರೆ ಸಾಕ್ಷಿಯು ಸ್ವಲ್ಪ ಬರುತ್ತಿತ್ತು ಎಂದು ನುಡಿಯುತ್ತಾರೆ. ಆ ದಿನ ಸರ್ವೆ ನಂ: ***51, 52*** ರಲ್ಲಿ ಬಾಂದ್ ಕಲ್ಲುಗಳನ್ನು ಮೊದಲು ಗುರುತಿಸಿದೆವು. ಸರ್ವೆ ನಂ: ***51*** ಡಿಕ್ರಿದಾರರದ್ದಾಗಿದ್ದು, ಸರ್ವೆ ನಂ: ***52*** ತೀರ್ಪುಋಣಿದಾರರದ್ದಾಗಿರುತ್ತದೆ. ಸದರಿ ಬಾಂದ್ ಕಲ್ಲುಗಳ ನಡುವೆ ***3*** ಚೈನು ಅಂತರವಿರುತ್ತದೆ. ಎರಡೂ ಜಮೀನುಗಳಲ್ಲಿ ಕರಾಬು ಇಲ್ಲ ಎಂದರೆ ಸರಿ. ಡಿಕ್ರಿದಾರರ ಅಡಿಕೆ ತೋಟ ಹಳ್ಳದ ಅಂಚಿನವರೆಗೂ ಇರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ತೀರ್ಪುಋಣಿದಾರರ ತೋಟವೂ ಸಹ ಹಳ್ಳದ ಅಂಚಿನವರೆಗೂ ಇರುತ್ತದೆಂದು ನುಡಿಯುತ್ತಾರೆ. ನಾನು ಸೂಚನಾವಳಿಯಲ್ಲಿ ತಿಳಿಸಿದಂತೆ ಸರ್ವೆ ನಂ:***51/1, 2*** ರಲ್ಲಿ ***1*** ಎಕರೆ ***19*** ಗುಂಟೆ ಜಮೀನನ್ನು ಅಳತೆ ಮಾಡಿರುತ್ತೇನೆ. ಹಳ್ಳವು ಸುಮಾರು ***100*** ಅಡಿ ಅಗಲ ಇರುತ್ತದೆ. ಹಳ್ಳದ ಹಾಳ ಎಷ್ಟಿದೆ ಎಂಬ ಬಗ್ಗೆ ತಿಳಿದುಕೊಂಡಿಲ್ಲ.

ನಾನು ಸ್ಥಳಕ್ಕೆ ಭೇಟಿ ನೀಡಿದಾಗ ತೀರ್ಪುಋಣಿದಾರರು ತಮ್ಮ ***4*** ನೇ ಸೂಚನಾವಳಿಯಲ್ಲಿ ತಿಳಿಸಿದಂತೆ ತೀರ್ಪುಋಣಿದಾರನು ಹಳ್ಳದಲ್ಲಿ ಅಡ್ಡಲಾಗಿ ಕಲ್ಲಿನ ಚಪ್ಪಡಿಗಳನ್ನು ಹರಿಯುತ್ತಿರುವ ನೀರಿಗೆ ನಿಲ್ಲಿಸಿರುತ್ತಾರೆಂದು ನಾನು ವರದಿಯಲ್ಲಿ ಹೇಳಿದ್ದು, ನೀರು ಅಲ್ಲಿ ನಿಂತಿದೆಯೇ ಅಥವಾ ಹರಿಯುತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ದಕ್ಷಿಣ ಕಡೆಗೆ ನೀರು ಹರಿಯುತ್ತಿದೆ ಎಂದು ನುಡಿಯುತ್ತಾರೆ. ಹಳ್ಳವು ಸ್ವಾಭಾವಿಕವಾಗಿ ದಕ್ಷಿಣ ದಿಕ್ಕಿನ ಕಡೆಗೆ ಹರಿಯುತ್ತಿರುತ್ತದೆ. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ತಾನು ಅಳತೆ ಕಾರ್ಯದಲ್ಲಿ ಭೇಟಿ ನೀಡಿದ ಸ್ಥಳಗಳೆಂದು ಗುರುತಿಸಿದ್ದರಿಂದ ನಿಡಿ-***1***

ಮತ್ತು *2* ಎಂದು ಗುರುತಿಸಲಾಯ್ತು. ನಾನು ಅಳತೆಕಾರ್ಯ ಮಾಡುವಾಗ ಹಳ್ಳಕ್ಕೆ *3* ಚಪ್ಪಡಿ ಕಲ್ಲುಗಳನ್ನು ಅಡ್ಡಲಾಗಿ ನಿಲ್ಲಿಸಿದ್ದರು. ಸದರಿ ಕಲ್ಲುಗಳ ಅಳತೆಯನ್ನು ನಾನು ಅಳತೆ ಮಾಡಿಲ್ಲ. *100* ಅಡಿ ಹಳ್ಳಕ್ಕೆ *3* ಚಪ್ಪಡಿ ಕಲ್ಲುಗಳು ಅಡ್ಡಲಾಗಿ ನಿಲ್ಲಿಸಿದರೆ ನೀರಿನ ಹರಿವಿಗೆ ಅಡ್ಡಿಯಾಗಲ್ಲ ಎಂದರೆ ಸರಿ. ತೀರ್ಪುಋಣಿದಾರರು ಯಾವುದೇ ರೀತಿಯ ಚಪ್ಪಡಿ ಕಲ್ಲನ್ನು ಹಳ್ಳಕ್ಕೆ ಅಡ್ಡಲಾಗಿ ನಿಲ್ಲಿಸಿಲ್ಲ, ಡಿಕ್ರಿದಾರರ ಮಾತು ಕೇಳಿ ಸುಳ್ಳು ವರದಿ ತಯಾರಿಸಿರುತ್ತೇನೆಂದರೆ ಸರಿಯಲ್ಲ.

ನಾನು ತಯಾರಿಸಿದ ವರದಿಗೆ ಸಾಕ್ಷಿದಾರರ ಪೈಕಿ ಒಬ್ಬ ಡಿಕ್ರಿದಾರರ ಮಗ ಎಂದರೆ ನನಗೆ ಗೊತ್ತಿಲ್ಲ. ಇನ್ನೊಬ್ಬ ಸಾಕ್ಷಿದಾರ ಆರ್.ಮರುಳಪ್ಪ ಎನ್ನುವವರ ಸಹಿಯನ್ನು ಡಿಕ್ರಿದಾರರ ಮನೆಯಲ್ಲಿ ಪಡೆದಿರುತ್ತೇನೆಂದರೆ ಸರಿಯಲ್ಲ. ದಿ:*10-07-2018* ರಂದು ಮಾಡಿದ ಅಳತೆ ಕಾರ್ಯದ ಸಮಯದಲ್ಲಿ ಸುಮಾರು *3* ಗಂಟೆಗಳ ಕಾಲ ಸ್ಥಳದಲ್ಲಿ ಇದ್ದೆನು. ದಿ:*10-7-2018* ರಂದು ನಾನು ಯಾವುದೇ ಅಳತೆ ಕಾರ್ಯ ಮಾಡಿಲ್ಲ, ಡಿಕ್ರಿದಾರರು ಹೇಳಿದಂತೆ ನಕ್ಷೆಯನ್ನು ತಯಾರಿಸಿ ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಡಿಕ್ರಿದಾರರು *2* ಎಕರೆ *7* ಗುಂಟೆ ಜಮೀನಿನಲ್ಲಿ ಸ್ವಾದೀನ ಹೊಂದಿದ್ದರೂ ಸಹ ನನ್ನ ವರದಿಯಲ್ಲಿ *1* ಎಕರೆ *19* ಗುಂಟೆ ಎಂದು ತಿಳಿಸಿರುತ್ತೇನೆಂದರೆ ಸರಿಯಲ್ಲ. ನಾನು ಅಳತೆ ಮಾಡಿದ ಬಗ್ಗೆ ತೀರ್ಪುಋಣಿದಾರರಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವರದಿ ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***